ಮರುಕಳಿಕೆ

**ಕೆಂಪೇಗೌಡರ ಇತಿಹಾಸಕ್ಕೆ ಹಾಗೂ ರಂಗನಾಥ ಸ್ವಾಮಿಗೆ ಪ್ರಸಿದ್ಧವಾದ ಮಾಗಡಿಗೆ ಗಾಂಧೀಜಿ ಅವರ ನೆನಪುಗಳ ಹಿರಿಮೆಯೂ ಇದೆ.**

■ ದೊಡ್ಡಬಾಣಗೆರೆ ಮಾರಣ್ಣ




ಮಾಗಡಿ ತಾಲ್ಲೂಕಿನ ಬಗಿನಗೆರೆ ಬಳಿ ರಾ.ಹೆ. 75ರ ಪಕ್ಕದಲ್ಲಿ ಇರುವ 'ಗಾಂಧಿ ಶತಮಾನದ ತೋಟ'




ಗಾಂಧೀವಾದಿ ನಾರಾಯಣಪ್ಪ ಆರಂಭಿಸಿದ್ದ 'ಗಾಂಧಿಘರ್'

# ಮಾಗಡಿಯಲ್ಲಿ ಗಾಂಧಿಸ್ಮೃತಿಗಳು

ಸೀತಾರಾಮ ಲಕ್ಷ್ಮಣರು ನಡೆದಾಡಿದ ಸ್ಥಳವಿದು, ಹನುಮಂತ ನೆಲೆಸಿದ್ದು ಇಲ್ಲಿಯೇ, ಇದೋ ಇದು ಭೀಮನ ಹೆಜ್ಜೆ – ಇಂಥ ಪೌರಾಣಿಕ ಸ್ಮೃತಿಗಳು ಭಾರತದ ಎಲ್ಲ ರಾಜ್ಯಗಳಲ್ಲೂ ಇವೆ. 'ಇದು ಗಾಂಧೀಜಿ ವಿಶ್ರಾಂತಿ ತೆಗೆದುಕೊಂಡ ಸ್ಥಳ, ಇದು ಗಾಂಧಿ ನೆನಪಿನ ಮರ, ಗಾಂಧಿ ಭೇಟಿಕೊಟ್ಟ ಊರು' – ಹೀಗೆ, ಮಹಾತ್ಮ ಗಾಂಧೀಜಿಗೆ ಸಂಬಂಧಿಸಿದಂತೆ ಐತಿಹಾಸಿಕ ಸ್ಮೃತಿಗಳೂ ದೇಶದಲ್ಲಿ ಸಾಕಷ್ಟಿವೆ. ಅಂಥದೊಂದು ಐತಿಹಾಸಿಕ ಸ್ಮೃತಿ ಕರ್ನಾಟಕದ ಮಾಗಡಿಗೆ ಸಂಬಂಧಿಸಿದ್ದು.

ದೇಶ ಕಟ್ಟುವ ಕೆಲಸಕ್ಕಾಗಿ ಧನ–ಜನ ಸಂಗ್ರಹಿಸಲು ಮತ್ತು ಜನಜಾಗೃತಿ ಮೂಡಿಸಲು ಗಾಂಧೀಜಿ ಕನ್ನಡ ನಾಡಿನ ಉದ್ದಗಲಕ್ಕೂ ಉತ್ಸಾಹದ ಚಿಲುಮೆಯಂತೆ ಓಡಾಡಿದ್ದಾರೆ. ಸಂಪರ್ಕ ಸಾಧನಗಳಾದ ಕಾಲ್ನಡಿಗೆ, ಎತ್ತಿನಬಂಡಿ, ಕುದುರೆಗಾಡಿ, ರೈಲುಗಳಲ್ಲಿ ನಾಡನ್ನು ಸುತ್ತಿದ್ದಾರೆ. ಹಾಗೆ ಗಾಂಧೀಜಿ ಸುತ್ತಾಡಿದ ನೆನಪುಗಳು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿವೆ.

ಅಸ್ಪೃಶ್ಯತೆ ವಿರೋಧಿ ಮೈಸೂರಿನ ಅಭಿಯಾನಕ್ಕೆ ಸಂಬಂಧಿಸಿದಂತೆ ದಾಬಸ್‌ಪೇಟೆ, ಶಿವಗಂಗೆ, ಮಾಗಡಿ ಮಾರ್ಗವಾಗಿ ಗಾಂಧೀಜಿ ತೆರಳುವಾಗ, 1934ರ ಜನವರಿ 3ರಂದು ವೀರೇಗೌಡನ ದೊಡ್ಡಿಯಲ್ಲಿ ದೇಶಪ್ರೇಮಿಗಳ ಅಪೇಕ್ಷೆಯಂತೆ ಎತ್ತಿನ ಬಂಡಿಯಲ್ಲಿ ಬಂದು ಇಳಿದರು. 'ಮಂಚನಬೆಲೆಯಲ್ಲಿ ನಡೆಯುತ್ತಿದ್ದ ಸೇಂದಿ ಮಾರಾಟ ನಿಲ್ಲಿಸುವ ಬಗ್ಗೆ ಸ್ಥಳೀಯರಾದ ನಂಜುಂಡಾರಾಧ್ಯ, ದಬ್ಬಗುಳಿ ಹನುಮಂತಯ್ಯ, ನಾರಾಯಣ ಶೆಟ್ಟಿ, ಗೊಲ್ಲಹಳ್ಳಿ ಚಿಕ್ಕೇಗೌಡ, ನಾರಾಯಣ ಸಿಂಗ್, ಪೋಲೋಹಳ್ಳಿ ಪೂಜಾರಿ ಚಿಕ್ಕಣ್ಣಪ್ಪ, ಬೆಳ್ಳಿಓಲಗದ ಚಿನ್ನಸ್ವಾಮಪ್ಪ ತಂಡದವರು ಮಾಹಿತಿ ನೀಡಿದರು.

ದೇಶಪ್ರೇಮಿಗಳ ಬೆನ್ನುತಟ್ಟಿದ ಬಾಪೂಜಿ, ಈಚಲು ವನದ ಸತ್ಯಾಗ್ರಹ ಮುಂದುವರೆಸುವಂತೆ ಮಾರ್ಗದರ್ಶನ ನೀಡಿದರು. ನಂತರ ಲಕ್ಷ್ಮೀಪುರದ ಮಾರ್ಗವಾಗಿ ಕ್ಲೋಸ್‌ಪೇಟೆ ರಾಮನಗರ ತಲುಪಿ, ಮೈಸೂರಿನತ್ತ ಪ್ರಯಾಣ ಬೆಳೆಸಿದರು' ಎಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ದಬ್ಬಗುಳಿ ಹನುಮಂತಯ್ಯ ನೆನಪಿಸಿಕೊಳ್ಳುತ್ತಾರೆ.

ಗಾಂಧೀಜಿ ಅವರ ಸರ್ವೋದಯದ ತತ್ವಗಳನ್ನು ಜೀವನದ ಉಸಿರನ್ನಾಗಿಸಿಕೊಂಡ ಬೆಳಗುಂಬದ ನಾರಾಯಣಪ್ಪ ಅವರು ಭಾರತಕ್ಕೆ ಸ್ವಾತಂತ್ರ್ಯ ಗಳಿಸಿದಂದು ರಾತ್ರಿ 12 ಗಂಟೆ ಸಮಯದಲ್ಲಿ ಬೆಳಗುಂಬದಲ್ಲಿ ಹರಿಜನರೊಂದಿಗೆ ತಮಟೆ ಬಡಿದು ಸ್ವಾತಂತ್ರ್ಯದ ಸವಿಯನ್ನು ಊರಿಗೆಲ್ಲಾ ಸಾರಿದರು. ಕೂಡೊಕ್ಕಲು ಬೇಸಾಯವನ್ನು ಗ್ರಾಮದಲ್ಲಿ ಜಾರಿಗೊಳಿಸಲು ಯತ್ನಿಸಿದರು. ಕೆಲವರ ವಿರೋಧದಿಂದಾಗಿ ತಿಪ್ಪಸಂದ್ರ ಹೋಬಳಿಯ ಬಗಿನಗೆರೆಗೆ ತೆರಳಿ 'ಗಾಂಧಿಘರ್' ಸ್ಥಾಪಿಸಿದ್ದರು. ಸಾಬರಮತಿ ಆಶ್ರಮದಲ್ಲಿನ ದಿನಚರಿಯಂತೆ ಚರಕದಿಂದ ನೂಲುವುದು, ಸರ್ವೋದಯದ ತತ್ವ ಸಿದ್ಧಾಂತಗಳು, ಗಾಂಧೀಜಿ, ವಿನೋಭಾಬಾವೆ ಅವರ ತತ್ವಗಳನ್ನು ಜನಮಾನಸದಲ್ಲಿ ಉಳಿಸಲು ಭೂದಾನ ಚಳವಳಿ ನಡೆಸಿದರು. ಹರಿಜನೋದ್ಧಾರ, ಅಸ್ಪೃಶ್ಯತೆ ನಿರ್ಮೂಲನೆ, ಗುಡಿಕೈಗಾರಿಕೆ, ಗ್ರಾಮೋದ್ಯೋಗ, ಗ್ರಾಮರಾಜ್ಯವೇ ರಾಮರಾಜ್ಯದ ಕಲ್ಪನೆಗಳನ್ನು ಜನರಲ್ಲಿ ಬಿತ್ತಿಬೆಳೆಸಿದರು. ಇಂದಿಗೂ ಬಗಿನಗೆರೆಯಲ್ಲಿ ಬೆಳಗುಂಬದ ನಾರಾಯಣಪ್ಪ ಅವರ ಪುತ್ಥಳಿ ನಿರ್ಮಿಸಿ ಗೌರವ ಸಲ್ಲಿಸಲಾಗುತ್ತಿದೆ ಎಂದು ಹೇಮಾವತಿ ನದಿ ನೀರು ಹೋರಾಟ ಸಮಿತಿಯ ಸಂಸ್ಥಾಪಕರಲ್ಲಿ ಒಬ್ಬರಾದ ಬಗಿನಗೆರೆ ಕುಮಾರ್ ಸ್ಮರಿಸಿಕೊಳ್ಳುತ್ತಾರೆ.

ಗಾಂಧೀಜಿ ಅವರ ಶಿಷ್ಯರಾದ ಆರ್ಯಭಾನು 'ಸರ್ವೋದಯ', 'ಭೂದಾನ ಚಳವಳಿ' ಮುಂದುವರೆಸಿದ್ದರು. ಕೆಂಗೇರಿಯಲ್ಲಿ ಗಾಂಧಿ ಆಶ್ರಮ ಆರಂಭಿಸಿ, ಗಾಂಧೀಜಿ ಅವರ ತತ್ವಗಳನ್ನು ಅನುಷ್ಠಾನಗೊಳಿಸಲು ಖಾದಿಧಾರಿಯಾಗಿ ದುಡಿದರು.

ಕಲ್ಯದ ಮರಿಯಪ್ಪ ಅಲಿಯಾಸ್ ಭಗವಂತಯ್ಯ ಬಾಲ್ಯದಿಂದಲೇ ಬಾಪೂಜಿ ಅವರ ಆದರ್ಶಗಳಿಗೆ ಮಾರುಹೋಗಿ ಖಾದಿ ಬಟ್ಟೆ ಧರಿಸುವುದು, ಗ್ರಾಮಗಳಲ್ಲಿ ಪರಿಸರ ಸಂರಕ್ಷಿಸುವ ಜೊತೆಗೆ ರಾಮಭಜನೆ ಮಾಡುವುದನ್ನು ರೂಢಿಸಿಕೊಂಡಿದ್ದರು. ರಾಷ್ಟ್ರೀಯ ಹಬ್ಬಗಳಲ್ಲಿ ಗಾಂಧಿ ವೇಷ ಧರಿಸಿಕೊಂಡು, ತ್ರಿವರ್ಣ ಧ್ವಜವನ್ನು ಹಿಡಿದುಕೊಂಡು ಮಕ್ಕಳೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರು, 'ಮಾಗಡಿಯ ಗಾಂಧಿ' ಎಂಬ ಹೆಸರಿಗೆ ಪಾತ್ರರಾಗಿದ್ದರು.

ಬಗಿನಗೆರೆ ಬಳಿ 1970ರ ಅಕ್ಟೋಬರ್ 2ರಂದು ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು 100 ಎಕರೆ ವಿಸ್ತೀರ್ಣದಲ್ಲಿ 'ಗಾಂಧಿ – ಶತಮಾನದ ತೋಟ' ಉದ್ಘಾಟಿಸಿದ್ದಾರೆ. ಎಂ.ಎಚ್. ಮರಿಗೌಡ ಅವರು ಗಾಂಧಿ ಶತಮಾನದ ತೋಟವನ್ನು ಅಭಿವೃದ್ಧಿಪಡಿಸಿದ್ದಾರೆ. ಇಂದಿಗೂ ತೋಟಗಾರಿಕಾ ಇಲಾಖೆ ವತಿಯಿಂದ ಗಾಂಧಿ ಶತಮಾನದ ತೋಟದಲ್ಲಿ 1700 ಮಾವಿನ ಮರಗಳು, 625 ಸಪೋಟ, 125 ತೆಂಗು, 80 ಸೀಬೆ, 50 ಹಲಸು, 80 ಗೋಡಂಬಿ ಹಾಗೂ 20 ನೇರಳೆ ಮರಗಳ ಪೋಷಣೆ ನಡೆಯುತ್ತಿದೆ. ಕೃಷಿ ಚಟುವಟಿಕೆಗಳೂ ಅಲ್ಲಿ ನಡೆಯುತ್ತಿವೆ.

ಹಸಿರಿನಿಂದ ಕಂಗೊಳಿಸುವ ಗಾಂಧಿ ಶತಮಾನದ ತೋಟದಲ್ಲಿ ಇಂದು ಸಹಸ್ರಾರು ಪಕ್ಷಿಗಳು ಗೂಡು ಕಟ್ಟಿಕೊಂಡು ಜೀವಿಸುತ್ತಿವೆ. ಗಾಂಧಿ ನಡೆದುಹೋದ ನೆಲ ಮಾಗಡಿ ಪಟ್ಟಣದ 'ಎನ್‌ಇಎಸ್ ಸರ್ಕಲ್'ಗೆ 'ಗಾಂಧಿ ಸರ್ಕಲ್' ಎಂದು ನಾಮಕರಣ ಮಾಡಲಾಗಿದೆ. ವೃತ್ತದಲ್ಲಿ ಗಾಂಧೀಜಿ ಪುತ್ಥಳಿಯೂ ಇದೆ.

ಪ್ರತಿಕ್ರಿಯಿಸಿ: feedback@sudha.co.in